**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ. ಎಫ್.ಸಿ ನ್ಯಾಯಾಲಯ ಆಳಂದ</u>**

**<u>ಸಿ.ಸಿ. ನಂ. 179/2020</u>**

ಪಿರ್ಯಾದಿ ಕರ್ನಾಟಕ ಸರ್ಕಾರದ ಪರ
ಪಿ.ಎಸ್.ಐ ನರೋಣಾ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರು 1. ಶಿವಕುಮಾರ ತಂದೆ ನಾಗಪ್ಪಾ ಮೇಲಕೇರಿ,
ವಯಃ 27ವರ್ಷ, ಉಃ ಕೂಲಿ ಕೆಲಸ,
ಸಾಃ ಬೆಟ್ಟಜೇವರ್ಗಿ ಗ್ರಾಮ, ತಾಃಜಿಲ್ಲಾಃ ಕಲಬುರಗಿ.

**<u>ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಯ ಹೇಳಿಕೆ</u>**

ಪ್ರಶ್ನೆ 1 ನ್ಯಾಯಾಲಯದ ಮುಂದೆ ಅಭಿಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ ಆರೋಪಿ.**ಕೇಳಿದ್ದೇವೆ**

ಪ್ರಶ್ನೆ 2. **ಸಿ.ಡಬ್ಲೂ. 1. ಪಿ.ಡಬ್ಲೂ. 1. ನೀಲಮ್ಮ ಗಂಡ/ತಂದೆ ವಿಠಲ,** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುತ್ತದೆ. ಚಾಸಾ-4 ನನ್ನ ತಂದೆ, ಚಾಸ-5 ನನ್ನ ತಾಯಿ, ಚಾಸಾ-2,3,6 ರಿಂದ 8 ಪರಿಚಯ ಇರುತ್ತಾರೆ. ಬೆ. 7.00 ಗಂಟೆಗೆ ತಾಯಿಕಾರ್ಡಗಾಗಿ ಅರ್ ಸಿ ಎಸ್ ನಂಬರ ಕೇಳಿದಾಗ ಬರೆದುಕೊಟ್ಟೆವು ಮನೆಗೆ ಹೋಗಿ ಇಟ್ಟು ಬಂದರು ನಂತರ ನನಗೆ ಭಾಗ್ಯಾಲಕ್ಷ್ಮಿ ಮಾಡಿಸಿಕೊಡು ಎಂದು ಕೇಳಿಕೊಂಡರು ಆಗ ನಾನು ಅದು ನಮಗೆ ಸಂಬಂಧ ಪಡುವುದಿಲ್ಲ ಅಂಗನವಾಡಿರವರಿಗೆ ಸಂಬಂಧಪಡುತ್ತದೆ ಎಂದು ಹೇಳಿದಾಗ ನನಗೆ ಅವಾಚ್ಯಶಬ್ದಗಳಿಂದ ಬೈದು ಕೈಯಿಂದ ಹೊಡೆದರು ಅಲ್ಲೆ ಬಿದ್ದಿದ್ದ ಕಟ್ಟಿಗೆಯಿಂದ ನನ್ನ ಎಡಗೈಗೆ ಹೊಡೆದರು. ನನ್ನ ತಂದೆ - ತಾಯಿ ಬಿಡಿಸಲು ಬಂದರು ಆಗ ಅವರನ್ನು ತಳ್ಳಿದಾಗ ಅವರು ನೆಲಕ್ಕೆ ಬಿದ್ದರು. ನನಗೆ ತಲೆಗೆ ಹೊಡೆಯಲು ಬಂದಾಗ ಕೈ ಅಡ್ಡ ತಂದಾಗ ನನ್ನ ಕೈಗೆ ಹೊಡೆದರು. ಅದರಿಂದ ನನ್ನ ಕೈ ಮುರಿದಿತ್ತು. ನಂತರ 1 ಗಂಟೆಗೆ ಠಾಣೆಗೆ ಹೋಗಿ ದೂರನ್ನು ಬರೆಯಿಸಿ ಅಲ್ಲೆ ಇದ್ದ ಆಸ್ಪತ್ರೆಗೆ ಹೊದೇವು ಅವರು ಕಲಬುರಗಿ ಆಸ್ಪತ್ರೆಗೆ ನಮ್ಮನ್ನು ಕಳುಹಿಸಿದರು. ಜೀವ ಬೇದರಿಕೆ ಹಾಕಿದರ. ಅಕ್ಕಪಕ್ಕದವರು ಹೇಳುವ ಮುನ್ನ ಹೊಡೆದು ಹೋಗಿದ್ದರು ಆಸ್ಪತ್ರೆಯಲ್ಲಿ 1 ವಾರಗಳ ಕಾಲ ದಾಖಲಿದ್ದೇವು ದಿಃ 24.09.2019 ರಂದು ನಡೆಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತೀರಿ?

ಉತ್ತರಃ ಆರೋಪಿ. **ಸುಳ್ಳು**

ಪ್ರಶ್ನೇ 3- **ಸಿ.ಡಬ್ಲೂ.4. ಪಿ. ಡಬ್ಲೂ. 2, ವಿಠಲ್ ತಂದೆ ಬಸಣ್ಣ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುತ್ತದೆ. ಚಾಸಾ-1 ನನ್ನ ಮಗಳು, ಚಾಸ-2,3,6 ರಿಂದ 8 ರವರ ಪರಿಚಯ ಇರುತ್ತದೆ. ಚಾಸ-5 ನನ್ನ ಹೆಂಡತಿ, ನನ್ನ ಮಗಳು ಆಶಕಾರ್ಯಕರ್ತೆ ಆಗಿ ಕೆಲಸ ಮಾಡುತ್ತಾಳೆ ತಾಯಿ ಕಾರ್ಡ ಮಾಡಿಸಿ ಚಾಸ-1ರವರು ಆರೋಪಿಗೆ ಕೊಟ್ಟಿರುತ್ತಾರೆ. ಆರೋಪಿ ಭಾಗ್ಯ ಲಕ್ಷ್ಮಿ ಮಾಡಿಕೊಡು ಎಂದು ಕೇಳುತ್ತಿದ್ದನು ಚಾಸಾ-1ರವರು ಅದು ಅಂಗನವಾಡಿರವರ ಕೆಲಸ ನನಗೆ ಬರುವುದಿಲ್ಲ ಎಂದು ಹೇಳಿದಳು ಆರೋಪಿ ಬರವಣಿಗೆ ರೂಪದಲ್ಲಿ ನನಗೆ ಕೊಡಿ ಎಂದು ಕೇಳಿದ ಕಾರಣ ಚಾಸಾ-1ರವರು ಬರವಣಿಗೆ ರೂಪದಲ್ಲಿ ಬರೆದುಕೊಟ್ಟಿರುತ್ತಾರೆ. ಬರೆದುಕೊಟ್ಟ ಚೀಟಿಯನ್ನು ಮನೆಯಲ್ಲಿ ಇಟ್ಟು ನನಗೆ ಏಕೆ ತೊಂದರೆ ನೀಡುತ್ತೀದ್ದಿಯಾ ಎಂದು ಆರೋಪಿ ಕೇಳಿದನು. ನಾನು ನಳದ ಹತ್ತಿರ ನೀರು ತುಂಬಲು ಹೋದಾಗ ಆರೋಪಿ ಹೊಡೆಯಲು ಬಂದನು. ನನಗೂ ಹಾಗೂ ಚಾಸಾ-5ರವರಿಗೂ ಹೊಡೆದು ನೂಕ್ಕಿಸಿಕೊಟ್ಟು ಚಾಸಾ-1ರವರಿಗೂ ಹೊಡೆದನು ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲ ಎಂದು ಆರೋಪಿ ಜೀವ ಬೇದರಿಕೆ ಹಾಕಿರುತ್ತಾನೆ. ಕಟ್ಟಿಗೆ ಇಂದ ಚಾಸಾ-1ರವರಿಗೆ ಆರೋಪಿ ಹೊಡೆದಿರುತ್ತಾನೆ. ಚಾಸ-6 ಹಾಗೂ 8ರವರು ಜಗಳವನ್ನು ಬಿಡಿಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. **ಸುಳ್ಳು**

ಪ್ರಶ್ನೆ 4- **ಸಿ.ಡಬ್ಲೂ.9, ಪಿ. ಡಬ್ಲೂ.3 ಡಾಃ ಆನಂದಕುಮಾರ ಪಾಟೀಲ ತಂದೆ ಬಸವರಾಜ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು 2017 ರಿಂದ ಇಲ್ಲಿಯವರಗೆ ಸರಕಾರಿ ಆಸ್ಪತ್ರೆ ಕಲಬುರಗಿಯಲ್ಲು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ: 24.09.2019 ರಂದು ಸಂಜೆ 04.25 ಗಂಟೆಗೆ ರೋಗಿಯನ್ನು ತಪಾಸಣೆ ಮಾಡಿರುತ್ತೇನೆ. ರೋಗಿ ಹೊಡೆದಾಟದ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿದ್ದನು. ರೋಗಿಯ ಚಾಸಾ-೧ ರವರು ಆಗಿದ್ದರು. ತಪಾಸಣೆ ಮಾಡಲಾಗಿ Deformity of left forearm ಎಕ್ಸರೇ ಮಾಡಲಾಗಿ Fracture of lower two third of Shaft of radius and ulna left was found. ಈ ಮೇಲೆ ಹೇಳಿದ ಗಾಯಗಳು ತೀರ್ವ ಸ್ವರೂಪದ ಗಾಯ ಎಂದು ಅಭಿಪ್ರಾಯ ನೀಡಿರುತ್ಥೆನೆ. ಸಾಕ್ಷಿಗೆ ಈಗ ಗಾಯದ ಪ್ರಮಾಣ ಪತ್ರವನ್ನು ತೋರಿಸಿ ಅದರಲ್ಲಿ ಇರುವ ಸಹಿಯನ್ನು ಗುರುತಿಸಿದ್ದು ಗಾಯದ ಪ್ರಮಾಣ ಪತ್ರವನ್ನು ನಿಪಿ-2 ಎಂಥು ಸಾಕ್ಷಿ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. **ಸುಳ್ಳು**

ಪ್ರಶ್ನೆ 5- **ಸಿ.ಡಬ್ಲೂ.6, ಪಿ. ಡಬ್ಲೂ. 7 ರವರು ಆದ ವಿಜಯಕುಮಾರ ತಂದ ಅಪ್ಪಾರಾಯ ಮೇಳಕೇರಿ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಬೆಳಿಗ್ಗೆ 6.30 ರಿಂದ 7.00 ಗಂಟೆಗೆ ನೀರು ತುಂಬುವಾಗ ಚಾಸ-1 ಮತ್ತು ಆರೋಪಿಯ ಮಧ್ಯ ಗಲಾಟೆ ನಡೆದಿತ್ತು. ಏನಾಯಿತು ಎಂದು

ನೋಡಿದಾಗ ಆರೋಪಿಯು ಚಾಸಾ-1 ರವರಿಗೆ ಬಡಿಗೆಯಿಂದ ಹೊಡೆಯುವಾಗ ನಾನು ಹೋಗಿ ಬಿಡಿಸಿರುತ್ತೇನೆ. ನಂತರ ಚಾಸಾ-1ರವರನ್ನು ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ?

ಉತ್ತರಃ ಆರೋಪಿ. **ಸುಳ್ಳು**

ಪ್ರಶ್ನೆ 6- **ಸಿ.ಡಬ್ಲ್ಯೂ.11, ಪಿ. ಡಬ್ಲ್ಯೂ. 8 ರವರು ಆದ ಚೇತನ ತಂದೆ ಶಂಕರ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ದಿ.29.10.2018 ರಿಂದ 15.12.2019 ರವರೆಗೆ ನರೋಣಾ ಪೋಲಿಸ ಠಾಣೆಯಲ್ಲಿ ಪಿಎಸಐ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.07.11.2019 ರಂದು ರುಕ್ಮುದ್ದೀನ ಎಎಸಐ ರವರಿಂದ ಕಡತವನ್ನು ಪಡೆದುಕೊಂಡು ಅದೇ ದಿನ ಚಾಸಾ-1 ರವರ ಗಾಯದ ಪ್ರಮಾಣ ಪತ್ರ ಪಡೆದುಕೊಂಡು ಕಡತಕ್ಕೆ ಅಳವಡಿಸಿ ಅದೇ ದಿನ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಗೆ ಈಗ ನಿಪಿ-2ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. **ಸುಳ್ಳು**

ಪ್ರಶ್ನೆ 7- **ಸಿ.ಡಬ್ಲ್ಯೂ.10, ಪಿ. ಡಬ್ಲ್ಯೂ. 9 ರವರು ಆದ ಭೀಮಾಶಂಕರ ತಂದೆ ರಾಯಗೊಂಡಪ್ಪ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು 2014 ರಿಂದ ಫೆಬ್ರವರಿ 2020 ರವರೆಗೆ ನರೋಣಾ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 24.09.2019 ರಂದು ಮ. 01.00 ಗಂಟೆಗೆ ನಾನು ಠಾಣಾಧಿಕಾರಿಯ ಕರ್ತವ್ಯದಲ್ಲಿ ಇದ್ದಾಗ ಚಾಸಾ-1ರವರು ಠಾಣೆಗೆ ಹಾಜರಾಗಿ ಒಂದು ಟೈಪ್ ಮಾಡಿಸಿದ ದೂರನ್ನು ಸಲ್ಲಿಸಿದ್ದು ಅದರ ಆಧಾರದ ಮೇಲೆ ಗುನ್ನಾ ಸಂಖ್ಯೆ 133/2019 ಅಂತಾ ದಾಖಲಿಸಿ ತನಿಖೆ ಕೈಗೊಂಡು ಪ್ರ.ವ.ವ. ವರದಿಯನ್ನು ನಮ್ಮ ಸಿಬ್ಬಂದಿಯ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿ ಅದೇ ದಿನ ಮುಂದಿನ ತನಿಖೆಗಾಗಿ ಎ ಎಸ್ ಐ ರುಕ್ಮುದ್ದಿನ ಅವರಿಗೆ ಕಡತವನ್ನು ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ?

ಉತ್ತರಃ ಆರೋಪಿ. **ಸುಳ್ಳು**

ಪ್ರಶ್ನೆ 8- **ಸಿ.ಡಬ್ಲ್ಯೂ.12, ಪಿ. ಡಬ್ಲ್ಯೂ. 10 ರವರು ಆದ ರುಕ್ಮುದ್ದಿನ ತಂದೆ ಅಬ್ದುಲಸಾಬ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು 2018 ರಿಂದ ದಿಃ 31.01.2020 ರವರೆಗೆ ನರೋಣಾ ಎ.ಎಸ್.ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 24.09.2019 ರಂದು ಚಾಸಾ-10 ರವರ ಕಡೆಯಿಂದ ಈ ಪ್ರಕರಣದಲ್ಲಿ ಕಡತವನ್ನು ಪಡೆದು ತನಿಖೆ ಕೈಗೊಂಡು, ಗುನ್ನಾ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ-1ರವರು

ತೋರಿಸಿದ ಸ್ಥಳದಲ್ಲಿ 4.00 ಗಂಟೆಯಿಂದ 5.00 ಗಂಟೆಯವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿ ಸ್ಥಳದಿಂದ ಒಂದು ಕಟ್ಟಿಗೆಯನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-4 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-11 ರವರಿಗೆ ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ?

ಉತ್ತರಃ ಆರೋಪಿ. **ಸುಳ್ಳು**

ಪ್ರಶ್ನೆ 9 - ನೀವು ಏನನ್ನಾದರೂ ಹೇಳ ಬಯಸುವೀರಾ?

ಉತ್ತರಃ ಆರೋಪಿ. **ಏನು ಇಲ್ಲ**

ಪ್ರಶ್ನೆ 10- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ ಆರೋಪಿ. **ಏನು ಇಲ್ಲ**

(ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)

ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ನ್ಯಾಯಾಲಯ.